

# ನೃತ್ಯದ ಶಕ್ತಿ; ಸಾಧನೆಗೆ ಸ್ಫೂರ್ತಿ

**ವಚನಗಳನ್ನು ನೃತ್ಯಕ್ಕೆ ಅಳವಡಿಸಿ ಪ್ರದರ್ಶನ ನೀಡುವ ಮೂಲಕ ಜನಮಾನಸದಲ್ಲಿ ನೆಲೆನಿಂತಿರುವ ವಿದುಷಿ ಶುಭಾ ಧನಂಜಯ, ನೃತ್ಯಪ್ರದರ್ಶನ, ಕೊರಿಯೊಗ್ರಫಿ, ಸಂಘಟನೆ, ಬೋಧನೆ ಮೂಲಕ ಬಹುಶ್ರುತ ವಿದುಷಿಯಾಗಿ ರೂಪುಗೊಂಡಿದ್ದಾರೆ. ತಮ್ಮ ಸುದೀರ್ಘ ನೃತ್ಯ ಪಯಣದ ನೆನಪಿನ ಬುತ್ತಿಯನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.**

**■ ಉಮಾ ಅನಂತ್**

‘ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ’, ‘ನೀನೊಲಿದರೆ ಕೊರಡು ಕೊನರುವುದಯ್ಯ...’, ‘ಕಲ್ಲ ನಾಗರ ಕಂಡರೆ ಕೈಮುಗಿವರಯ್ಯ...’ ಇವೆಲ್ಲ ಬಸವಣ್ಣನವರ ಜನಪ್ರಿಯ ವಚನಗಳು. ಸಾರ್ವಕಾಲಿಕ ಸತ್ಯವನ್ನು, ಸಾಮಾಜಿಕ ಕಳಕಳಿಯನ್ನು ಬಿಂಬಿಸುವ ಇವೆಲ್ಲವೂ ನೃತ್ಯದಲ್ಲಿ ವಿಜೃಂಭಿಸಿದರೆ?

ವಚನಗಳನ್ನು ನೃತ್ಯದಲ್ಲಿ ಅಭಿವ್ಯಕ್ತಿಸುವಂಥ ಪ್ರಯತ್ನವನ್ನು ಇಪ್ಪತ್ತೈದು ವರ್ಷಗಳ ಹಿಂದೆಯೇ ಮಾಡಿ ಯಶಸ್ಸು ಕಂಡವರು ಭರತನಾಟ್ಯ ಕಲಾವಿದೆ ಶುಭಾ ಧನಂಜಯ. ವಚನಗಳಿಗೆ ನೃತ್ಯಸ್ಪರ್ಶ ನೀಡಿದಾಗ ಅದು ಸಹೃದಯರನ್ನು ಬೇಗನೆ ಮುಟ್ಟುತ್ತದೆ, ಹೃದಯ ತಟ್ಟುತ್ತದೆ.

‘ವಚನ ಸಾಹಿತ್ಯಕ್ಕೆ ಅದರದ್ದೇ ಆದ ಘನತೆ ಇದೆ. ವಚನಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ. ಜನರ ಮಧ್ಯೆ ಸೌಹಾರ್ದ ಮನೋಭಾವ ಹಾಗೂ ಸುಮಧುರ ಬಾಂಧವ್ಯ ಸೃಷ್ಟಿಸಲು ಅನುವು ಮಾಡಿಕೊಡುತ್ತವೆ. ಇವುಗಳನ್ನು ನೃತ್ಯದ ಮೂಲಕ ಅಭಿವ್ಯಕ್ತಿಸಿದರೆ ಇನ್ನೂ ಹೆಚ್ಚು ಜನರನ್ನು ಅದು ತಲುಪುತ್ತದೆ. ಹೀಗಾಗಿಯೇ ಈ ಪ್ರಯತ್ನ ಮಾಡಿರುವುದು’ ಎನ್ನುವುದು ಶುಭಾ ಅಭಿಮತ.

‘ಬಸವಣ್ಣನವರು ಮಾತ್ರವಲ್ಲ, ಅಲ್ಲಮಪ್ರಭು, ಅಕ್ಕಮಹಾದೇವಿ, ದೇವರದಾಸಿಮಯ್ಯ ಮುಂತಾದವರ ವಚನ ಸಾಹಿತ್ಯವೂ ಅರ್ಥಪೂರ್ಣ ಹಾಗೂ ಮನಮುಟ್ಟುವಂಥದ್ದು. ಇವರೆಲ್ಲರ ವಚನಗಳನ್ನು ನೃತ್ಯದಲ್ಲಿ ಅಭಿನಯಿಸುವುದು ಸೂಕ್ತ ಎಂದು 1990ರಲ್ಲೇ ಕರ್ನಾಟಕ ಸಂಗೀತ ವಿದುಷಿ ಜಾಹ್ನವಿ ಜಯಪ್ರಕಾಶ್ ಅವರು ನನಗೆ ಸಲಹೆ ನೀಡಿದ್ದರು. ಅವರ ಸಲಹೆ ಸರಿಯೆನಿಸಿ ಆಗಿನಿಂದಲೇ ವಚನ ಸಂಗೀತವನ್ನು ನೃತ್ಯಕ್ಕೆ ಅಳವಡಿಸಿ, ಕೊರಿಯೊಗ್ರಫಿ ಮಾಡಿ ನಾನೂ ಅಭಿನಯಿಸಿದೆ, ನನ್ನ ವಿದ್ಯಾರ್ಥಿಗಳಿಂದಲೂ ಅಭಿನಯ ಮಾಡಿಸಿದೆ. ಇದು ಬಹಳ ಜನಪ್ರಿಯವಾಯಿತು’ ಎನ್ನುತ್ತಾರೆ.

ಭರತನಾಟ್ಯ ಹಾಗೂ ಕಥಕ್‌ನಲ್ಲಿ ವಿದುಷಿ ಶುಭಾ ಧನಂಜಯ ಹೆಸರುವಾಸಿ ಕಲಾವಿದೆ. ದೇಶ ವಿದೇಶಗಳಲ್ಲಿ ನೂರಾರು ನೃತ್ಯ ಪ್ರದರ್ಶನ, ಕೊರಿಯೊಗ್ರಫಿ, ಕಾರ್ಯಕ್ರಮ ಸಂಘಟಕಿ, ಕಲಿಸುವಿಕೆ, ನೃತ್ಯ ಶಿಬಿರ, ಪ್ರಾತ್ಯಕ್ಷಿಕೆ, ಕಾರ್ಯಾಗಾರ ನಡೆಸಿಕೊಟ್ಟ ಅನುಭವ ಹೊಂದಿರುವ ಇವರು ಬಹುಶ್ರುತ ವಿದುಷಿ. ತಮ್ಮ ಸುದೀರ್ಘ ನೃತ್ಯ ಪಯಣವನ್ನು ಶುಭಾ ವಿವರಿಸುವುದು ಹೀಗೆ:

‘ಹಿಂದೆಲ್ಲ ಭರತನಾಟ್ಯ ಕಾರ್ಯಕ್ರಮಕ್ಕೆ ಹೋಗುವಾಗ ನಟುವಾಂಗ ಕಲಾವಿದರು, ಮೇಕಪ್ ಕಲಾವಿದರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕಿತ್ತು. ಚಿತ್ರದುರ್ಗ, ದಾವಣಗೆರೆ, ಕೂಡಲಸಂಗಮ. ಬಾಗಲಕೋಟೆ, ಕಲಬುರಗಿ ಮುಂತಾದ ಕಡೆಗಳಲ್ಲಿ ವಚನ ಸಾಹಿತ್ಯದ ಅಭಿಮಾನಿಗಳು, ಆಸಕ್ತರು ಹೆಚ್ಚು. ಹೀಗಾಗಿ ಅಲ್ಲೆಲ್ಲ ಭರತನಾಟ್ಯ ಮಾಡುವಾಗ ಕಡ್ಡಾಯವಾಗಿ ವಚನಗಳನ್ನೂ ನೃತ್ಯದಲ್ಲಿ ಸೇರಿಸಿಕೊಳ್ಳುತ್ತಿದ್ದೆ.